ದಿನ ಪತ್ರಿಕೆ

Reg No. M 1298

Daily & Weekly

For All Kinds of
Printing & Binding
The
Satyavadi
Press

SATYAVADI Oldest Newspaper of Mysore

ಸತ್ಯವಾದಿ

ಸಂಪುಟ 26 ಸೂಚಿಕೆ 305] ಬುಧವಾರ 2—6—1943 [3 ಪೈ

Opera — Aryamala

ಅಪೆರಾ—

3ನೇ ಅಮೋಘ ವಾರ

ಆರ್ಯಮಾಲ

ಪಿ. ಯು. ಚಿನ್ನಪ್ಪ, ಸಂತಾನಲಕ್ಷ್ಮಿ, ಶಕುಂತಲ, ಕೃಷ್ಣ, ಮಧುರಾ ಮುಂತಾದವರು ಪಾತ್ರವಹಿಸಿರುವರು

ಪ್ರಜಾಪ್ರತಿನಿಧಿ ಸಭೆ

(ನಮ್ಮ ಸ್ವಂತ ಸುದ್ದಿಗಾರರಿಂದ)

ಬೆಂಗಳೂರು ಜೂ 1

ಪ್ರಜಾಪ್ರತಿನಿಧಿ ಸಭೆಯ ಆಯವ್ಯಯ ಪರಿಶೀಲನಾ ಅಧಿವೇಶನವು ಸರ್ ಕೆ. ಪಿ. ಪುಟ್ಟಣ್ಣಶೆಟ್ಟರ ಪುರಭವನದಲ್ಲಿ ಇವತ್ತು 12 ಗಂಟೆಗೆ ಪ್ರಾರಂಭವಾಯಿತು.

ದಿವಾನ್ ಪ್ರಧಾನ ಶಿರೋಮಣಿ ಶ್ರೀ ಮಾಧವರಾಯರು ಅಸ್ವಸ್ಥತೆಯ ಬಗ್ಗೆ ವಿಷಾದವನ್ನು ಸೂಚಿಸಿ, ರಾಜಮಂತ್ರಿ ಪ್ರವೀಣ ಶ್ರೀ ಆನಂತಾರ್ಯರವರು ಅಧ್ಯಕ್ಷತೆಯನ್ನು ವಹಿಸಿ ಕಾರ್ಯಕಲಾಪವನ್ನು ನಡೆಸಿದರು. ಉಪಮಂತ್ರಿಗಳಾದ ಶ್ರೀಯುತರಾದ ಇಮಾಮ್, ಗುಂಡಪ್ಪ ಗೌಡ, ಶ್ರೀನಿವಾಸ, ಮತ್ತು ಅಪ್ಪಾಜಿ ಗೌಡರು ಅಧ್ಯಕ್ಷರ ಉಭಯ ಪಾರ್ಶ್ವಗಳಲ್ಲಿ ವಿರಾಜಿಸುತ್ತಿದ್ದರು.

ದಿವಾನರು ತಮ್ಮ ಭಾಷಣವನ್ನು ಇಂಗ್ಲೀಷಿನಲ್ಲಿ ಓದಿದರು. ನಂತರ ಶ್ರೀ ಸಿ. ಕೆ. ವೆಂಕಟರಾಮಯ್ಯನವರು ಅದರ ಕನ್ನಡ ಭಾಷಾಂತರವನ್ನು ಓದಿದರು

ಶ್ರೀ ಡಿ. ಹೆಚ್. ಚಂದ್ರಶೇಖರಯ್ಯನವರು ಘನ ಪ್ರೇಕ್ಷಕರ ಗದ್ದುಗೆಯಲ್ಲಿ ಮಂಡಿಸಿದ್ದರು. ಅಲ್ಪ ಸಂಖ್ಯಾತ ಮಹಿಳೆಯರು ಮತ್ತು ಹಲವು ಪ್ರೇಕ್ಷಕರು ಪ್ರೇಕ್ಷಕರ ಗದ್ದುಗೆಯಲ್ಲಿ ಕುಳಿತಿದ್ದರು.

ಸಭೆಯ ಒಲಭಾಗದಲ್ಲಿ ರಾಷ್ಟ್ರೀಯ ಸದಸ್ಯರು ಯೂರೋಪ್ಯರೂ ಬಂದರಲಿಲ್ಲವಾಗಿ ಅವರ ಸ್ಥಾನಗಳು ಖಾಲಿಯಾಗಿದ್ದವು. ಆದರೆ ಅಲ್ಲಿ ಡಾ॥ ಪಾಲ ಜನ್ನಪ್ಪನವರೂ ಮತ್ತು ರಾಷ್ಟ್ರೀಯ ಸಭೆಯವರಂತೆ ಉಡುಪು ಧರಿಸಿದ್ದ ಶ್ರೀ ಸುಬ್ಬೇಗೌಡರೂ ಮಾತ್ರ ಅಲಂಕಾರವಾಗಿ ಕೂತಿದ್ದರು.

ಮಿ॥ ರಜ್ವಿಯವರು ಖಾದಿ ಷರೀಫ್ ಮತ್ತು ರಸೂಲ್ ಸಾಹೇಬರವರು ಈ ಸಭೆಯ ಸದಸ್ಯರಾಗಿದ್ದು, ಮರಣ ಹೊಂದಿದ್ದಕ್ಕೆ ಅವರ ಗುಣಕಥನ ಮಾಡಿ ಅವರುಗಳ ಕುಟುಂಬಕ್ಕೆ ತಿಳಿಸಬೇಕೆಂದು ಸೂಚಿಸಿದರು. ಅದರಂತೆ ಸಭೆಯು ಮುಹೂರ್ತ ಕಾಲ ಮೌನವನ್ನವಲಂಬಿಸಿ ಸಂತಾಪವನ್ನು ಸೂಚಿಸಿತು.

ಹೊಸ ಸದಸ್ಯರುಗಳು ಪ್ರಮಾಣ ಸತ್ಯವನ್ನು ಓದಿ ಪ್ರಮಾಣವಾಡಿದರು.

ರಾವ್ ಬಹದ್ದೂರ್ ವೆಂಕಟರವ ಣರಾವ್ ನಾಯ್ಡು (ಪ್ರಶ್ನೆ 63) ಪೂರ್ಣ ಪೂರ್ತಿಯಾಗಿ ನಿವೃತ್ತ ನ್ಯಾಯಾಧೀಶರಾಗಿ ಹೈಕೋರ್ಟು ನ್ಯಾಯಾಧೀಶರನ್ನು ಇಲ್ಲಿನ ಹೈಕೋರ್ಟಿನ ಪ್ರಮುಖ ನ್ಯಾಯಾಧೀಶರನ್ನಾಗಿ ನೇಮಿಸಿದ ಬಗ್ಗೆ ಅನೇಕರು ಮತ್ತು ವಲಿವುಲ್ಲಾರು ಉಪಪ್ರಶ್ನೆ ಹಾಕಿದ್ದಕ್ಕೆ ಅಧ್ಯಕ್ಷರು, ಇದು ಶ್ರೀಮಾನ್ ಮಹಾರಾಜರ ಸ್ವಂತ ತಿಳುವಳಿಕೆಯಿಂದ ನಡೆದಿರುವ ಪ್ರಯುಕ್ತ ಈ ಸಭೆಯು ವಿಚಾರಿಸಿ ಚರ್ಚೆಗೆ ಅವಕಾಶವಿಲ್ಲವೆಂದು ಹೇಳಿದರು.

ರಾವ್ ಬಹದ್ದೂರ್ ಎಚ್. ಎಸ್. ನಂಜುಂಡಯ್ಯನವರು ಪ್ರೊಬೇಷನರನ್ನು ನೇಮಕ ಮಾಡಿದ ವಿಚಾರದಲ್ಲಿ ಉಪಪ್ರಶ್ನೆಯನ್ನು ಹಾಕಿದರು.

ಬಾಕಿಯು ಪ್ರಶ್ನೆಗಳು ಪಂಗಡದ ವಿಚಾರವಾಗಿತ್ತು.

ಶ್ರೀ ಭೂಪಾಲಂ ಚಂದ್ರಶೇಖರಯ್ಯನವರು ಶಿವಮೊಗ್ಗಾ ರೈಲ್ವೇ ಗೌಡ್ಸ್ ಷೆಡ್ಡಿನಲ್ಲಿ ಆದ ಅಸ್ಪೋಟನದಲ್ಲಿ ಆದ ಮರಣಗಳ ಬಗ್ಗೆ ಚರ್ಚಿಸಲು ಈ ಸಭೆಯನ್ನು ಮುಂದುವರಿಸಬೇಕೆಂದು ಸೂಚಿಸಿದರಾದರೂ ಅಧ್ಯಕ್ಷರು ಪ್ರಜೆಗಳ ಸೇವೆಗೆ ದಿಗೆ ಕುಂದುಕ ಬರುವ ಪ್ರಯುಕ್ತ ಅವಕಾಶ ಕೊಡದೆ ತಳ್ಳಿಬಿಟ್ಟರು.

ಲಾ ಸೆಕ್ರೆಟರಿಯವರು, ಸಮುದಾಯ ಕಂಬಾಲುಂದ ಬಿಲ್ಲನ್ನು ಸಭೆಯ ಒಪ್ಪಿಗೆಯ ಬಗ್ಗೆ ಮಂಡಿಸಿದರು. ಸಭೆಯು 3 ಗಂಟೆಗೆ ಫಲಾರಕ್ಕೆದ್ದಿತು.

ಸಭೆಯು ಮತ್ತೆ 3-30 ಮತ್ತೆ ದಿವಾನರ ಅಧ್ಯಕ್ಷತೆಯಲ್ಲಿ ಕೂಡಿತು. ಶ್ರೀ ಎಫ್. ಸಿ. ದೇವರಾಜೇ ಅರಸಿನವರೂ ಮುಸ್ಲಿಂಲೀಗ್ ಸದಸ್ಯರೂ ಮೇಲ್ಕಂಡ ಬಿಲ್ಲನ್ನು ಅನುಮೋದಿಸಿದರು. ಅನೇಕ ಮಂದಿ ಸದಸ್ಯರು ವಿರೋಧಿಸಿದರು.

ದಿವಾನರು ಎರಡನೇ ಪ್ರಕರಣವನ್ನು ವಿವರಿಸಿ ಈ ಬಿಲ್ಲಿನ ಅಭಿಪ್ರಾಯವನ್ನು ಒತ್ತಿಹೇಳಿದರು. ಶ್ರೀ ನವರತ್ನ ರಾಮರಾಮರಾಯರು ದಿವಾನರ ಅಭಿಮತದಂತೆ ಓಟಿಗೆ ಹಾಕುವುದಕ್ಕೆ ಮುಂಚೆ, ಸರಹದ್ದು ವಾಸಿಸಕ್ಕವರು ಇದೆನ್ನೆಲ್ಲಾ ಸ್ಪಷ್ಟವಾಗಿ ವಿವರಿಸಬೇಕೆಂದು, ಕಾನೂನಿಗೆ ಅನ್ವಯಿಸುವುದಿಲ್ಲವೆಂದರು ದಿವಾನರು 2 ಪ್ರಕರಣದ ತಿದ್ದುಪಡಿ ಪ್ರಕಾರ ವೋಟಿಗೆ ಹಾಕಿದರು, ಮುಸಲ್ಮಾನರೆಲ್ಲರೂ ಅನುಮೋದಿಸಿದರು. ರಾಷ್ಟ್ರೀಯ ಸಭೆಯ ಮಹಿಳಾ ಸದಸ್ಯರು ವಿರೋಧಿಸಿದರು.

ಅನುಮೋದಿಸಿದವರು 42

ವಿರೋಧಿಸಿದವರು 98

ಬಿಲ್ ಬಿದ್ದುಹೋಯಿತು.

ಪಾರ್ಲಿಮೆಂಟಿನ ಅಧ್ಯಕ್ಷರೆ ಗೈರುಹಾಜರಿನಲ್ಲಿ ಉಪಾಧ್ಯಕ್ಷರಾಗಲೀ ಕಮಿಷನರಾಗಲೀ ಕಾರ್ಯಕಲಾಪವನ್ನು ನಡೆಸುವ ಬಗ್ಗೆ ಏರ್ಪಾಡು ಮಾಡಲು ಇರುವ ಬಿಲ್ಲನ್ನು ಲಾ ಇಲಾಖಾ ಕಾರ್ಯದರ್ಶಿಗಳು ಸಭೆಯ ಮುಂದಿಟ್ಟರು. ಚರ್ಚೆ ನಡೆಯುತ್ತಿದೆ. 5 ಗಂಟೆಗೆ ಸಭೆಯನ್ನು ನಾಳೆಗೆ ಮುಂದುವರಿಸಲಾಯಿತು.

ಭಂಗಾರ ಬೆಳ್ಳಿ ಧಾರಣೆ

ಸವರ್	ರೂ.	101—12—0
ಬಂಗಾರ ತೊಲ	ರೂ.	87—0—0
ಬೆಳ್ಳಿ	,,	1—5—0

ಹೊಸಹೊಸ ಸುದ್ದಿ

ಲಂಡನ್ನಿನಲ್ಲಿ ನಿನ್ನೆ 300 ಲಂಡನ್ ಬ್ರಿಟಿಷ್ ಪ್ರಜೆಗಳು ಸಭೆ ಸೇರಿ, ಕಾಂಗ್ರೆಸ್ ನಾಯಕರನ್ನು ಬಂಧನದಿಂದ ಬಿಡಬೇಕೆಂದು ತೀರ್ಮಾನ ಮಾಡಿರುತ್ತಾರೆ.

ಂ ಂ

ಗಾಂಧೀಜಿಯವರ ವಿಷಯದಲ್ಲಿ ಜಿನ್ನಾರವರು ತೋರಿಸುವ ಕುಯುಕ್ತಿಗೆ ಪುದರಾಸಿನ ಲೀಗ್ ಸೆಕ್ರೆಟರಿಯವರಾದ ಮಿ॥ ಅಲ್ಲಾ ಪಿಚಾಯಿಯವರು ಲೀಗ್ ತ್ಯಜಿಸಿದರು.

ಂ ಂ

ಅಮೇರಿಕಾದಲ್ಲಿ ಪಾಲೋಮಿನೋ ನಲ್ಲಿರುವ ಇಂಡೋರ್ ಮಹಾರಾಜರು ತಮ್ಮ ಅಮೇರಿಕ ಹೆಂಡತಿಯನ್ನು ತ್ಯಜಿಸುವರೆಂಬ ತಿಳಿಯಬಂದಿದೆ, ಇವರು 'ಮಾರ್ಗರೆಟ್ ಲಾಲೆರ್ ಬ್ಲಾನ್ಕ್' ಯವರನ್ನು 1938 ಮಾರ್ಚಿಯಲ್ಲಿ ಮದುವೆಯಾದರು. ಆಗ ತಮ್ಮ ಹೆಸರನ್ನು ಮಿ॥ ಹೋಳ್ಕರ್ ಎಂದು ಹೇಳಿಕೊಂಡರು.

ಂ ಂ

ವಾಷಿಂಗ್ಟನ್ನಿನಲ್ಲಿ ಶ್ರೀಮಾನ್ ಗಡ್ಡಿ ರಂಗಯ್ಯ ನಾಯಿಡುರವರನ್ನು ಸೆಂಟ್ರಲ್ ಅಸೆಂಬ್ಲಿಗೆ ಸದಸ್ಯರನ್ನಾಗಿ ಆರಿಸಲು ಅನುಮೋದುವಾರಿ ಏಜೆಂಟಿಂಗನ್ನು ನಡೆಸಲು ಕಮ್ಯುನಿಸ್ಟ್ ಪಾರ್ಟಿಯವರಿಗೆ ಪೋಲೀಸ್ ಕಮಿಷನರು ಅನುಮತಿ ಕೊಡಲಿಲ್ಲ.

ಂ ಂ

ವರ್ಜೀನಿಯಾ ಹಾಟ್ ಸ್ಪ್ರಿಂಗ್ ಕೂಟದಲ್ಲಿ ಚೈನಾಕ್ಕೆ ಮಾಂಚೂರಿಯವನ್ನು ಕೊಡಬೇಕೆಂಬ ತೀರ್ಮಾನವಾಯಿತು.

ಂ ಂ

ಯುದ್ಧಾನಂತರ ಪ್ರಪಂಚದ ಜನಾಂಗಕ್ಕೆಲ್ಲಾ ಸ್ವಾತಂತ್ರ್ಯ ಕೊಡಬೇಕೆಂದು ಮಿ॥ ವೆಂಡಲ್ ವಿಲ್ಕಿಯವರು ಮತ್ತೆ ಒತ್ತಿ ಹೇಳಿರುವರು.

ಸುಂದರ ನಗರ ....

ವ್ಯಾರಿಸ್ಸಿನಲ್ಲಿ

ನಿನ್ನೆಯ ಸಂಚಿಕೆಯಿಂದ
ಮುಂದುವರಿದದ್ದು

ಪ್ಯಾರಿಸಿನಲ್ಲಿ ಧಾರಣೆ ನಿಯಂತ್ರಣದ ಖಾಸೂನುಗಳು ಅಧಿಕಾರಿಗಳು ಇದ್ದರೂ ಬೆಲೆ ಏರುತ್ತಲೇ ಇದೆ. ದುಡ್ಡಿಲ್ಲದಿದ್ದರೂ ಸಿಕ್ಕಿದ್ದನ್ನು ಕೊಂಡುಕೊಳ್ಳುತ್ತಾರೆ. ಮೋರುವವರು ಕಡಿಮೆ ಕೊಳ್ಳುವವರು ಬಹಳ. ಮನೆಗಳು ಬೈಸಿಕಲ್ ಗಳು ಪುಸ್ತಕ ಒಟ್ಟಿ ಪ್ರತಿಯೊಂದಕ್ಕೂ ವಿಪರೀತವಾದ ಬೆಲೆಯಿದೆ. ಜರ್ಮನರು ಇಲ್ಲಿ ಸರ್ವವನ್ನೂ ದೋಚುತ್ತಿದ್ದಾರೆ ಆಹಾರ ಸಾಮಗ್ರಿಗಳೂ ಇತರ ಅವಶ್ಯಕಗಳೂ ದಿನೇ ದಿನೇ ಮಾಯವಾಗುತ್ತಿವೆ ಒದಲು ಎಲ್ಲೆಲ್ಲೂ ಕಾಗದದ ದುಡ್ಡು ಕಂಡು ಬರುತ್ತಿವೆ. ಪ್ರತಿ ಕಾರ್ಖಾನೆಯೂ ನಾಜಿಗಳಿಗಾಗಿ ಕೆಲಸ ಮಾಡುತ್ತಿದೆ. ಕಾರ್ಖಾನೆಗಳ ವಿಲಿಯಾತರವಾಗಿ ಹಣ ಸಂಗ್ರಹಿಸುತ್ತಿವೆ. ತಮಗೆ ಕಚ್ಚಾಮಾಲುಗಳು ದೊರೆಯದಾಗ ಕಳ್ಳತನದ [ವ್ಯಾಪಾರದಿಂದ ಹೆಚ್ಚು ಬೆಲೆ ಕೊಟ್ಟು ಸಾಮಾನುಗಳನ್ನು ಪಡೆಯುತ್ತಾರೆ. ಅವರಿಗೆ ಕೊಡುವ ರೀತಿ ನಿಯಂತ್ರಿಸಿದ ಬೆಲೆಗೇ ಇರುತ್ತದೆ. ಆದರೆ ನಿಜವಾಗಿಯೂ ಅವರು ಅದಕ್ಕಿಂತ 15 ರಷ್ಟು ಹಣ ಕೊಟ್ಟಿರುತ್ತಾರೆ. ತಮ್ಮಲ್ಲಿರುವ ಕಾಗದದ ಹಣದ ರಾಶಿಯನ್ನು ಯಾವ ರೀತಿಯಿಂದಲಾದರೂ ಉಪಯೋಗಕರವಾದ ವಸ್ತುಗಳಾಗಿ ಬದಲಾಯಿಸಲು ಕಾರ್ಖಾನೆಯ ಮಾಲೀಕರು ಪ್ರಯತ್ನಮಾಡುತ್ತಾರೆ. ಅದಕ್ಕಾಗಿ ಅವರು ಹೆಚ್ಚಿನ ಬೆಲೆ ಕೊಡಲು ಹಿಂಜರಿಯುವುದಿಲ್ಲ. ಇಲ್ಲದಿದ್ದರೆ ನೋಟುಗಳ ಸ್ಥಿಟ್ಟ ಮಾಡುವುದೇಸು? ನಾಜಿಗಳಿಗಾಗಿ ಕೆಲಸ ಮಾಡದ ಕಾರ್ಖಾನೆಗಳು ಮುಚ್ಚಲ್ಪಟ್ಟಿವೆ ಅಥವಾ ಮುಚ್ಚುವಂಥಾ ಪರಿಸ್ಥಿತಿಯಲ್ಲಿವೆ ಅವುಗಳಿಗೆ ಕಚ್ಚಾ ಮಾಲುಗಳು ದೊರೆಯುವುದಿಲ್ಲ. ಇಂಥಾ ಕಾರ್ಖಾನೆಗಳ ಮೇಲೆ ಸುಳ್ಳು ಆರೋಪ ಹೊರಿಸಿ ನಾಜಿಗಳು ಅವನ್ನು ಮುಚ್ಚುತ್ತಾರೆ. ಅನೇಕ ಕಡೆಗಳಲ್ಲಿ ಕಾರ್ಖಾನೆಗಳನ್ನು ಜರ್ಮನಿಗೆ ಸಾಗಿಸುವ ಪ್ರಯತ್ನ ಮಾಡಿರುವಂತೆ. ಕೂಪನ ಕಾರ್ಡುಗಳ ಕ್ರಯವು ಏರಿದೆ. ಕಳೆದ ವರ್ಷ 20 ಫ್ರಾಂಕು ಬೆಲೆ ಇದ್ದ ಕಾರ್ಡಿಗೆ ಈ ವರ್ಷ 120 ರಿಂದ 150 ರ ವರೆಗೆ ಬೆಲೆ ಕೊಡಬೇಕು.

ಕೂಪನುಗಳಿದ್ದರೂ ಕೂಡ ನಮಗೆ ಬೇಕಾದ್ದೆಲ್ಲ ದೊರೆಯುವುದು ಕಷ್ಟ, ಆ ಕಾರಣದಿಂದ ಇಡೀ ದೇಶದಲ್ಲೆಲ್ಲ ಹಾಹಾಕಾರವೆದ್ದಿದೆ ಸಹಸ್ರಾರು ಜನರು ನಗರಗಳನ್ನು ಬಿಟ್ಟು ನಾಡುಗಳನ್ನು ಸುತ್ತುತ್ತಾರೆ. ತಾಮ್ರ, ರಬ್ಬರ್, ಗ್ಲಾಸ್, ಎಣ್ಣೆ, ಸಾಬೂನು ಮುಂತಾದ ಅಲಂಗೆಡ್ಡೆ ಮೊದಲಾದುವನ್ನು ತಂದು ಅವರು ಮಾರುತ್ತಾರೆ. ಈ ಸಾಮಾನುಗಳಿರುವಲ್ಲಿ ಹಣವು ಸುರಿಯುತ್ತದೆ. ಅದರೆ ಆ ಹಣದ ಬೆಲೆ ಎನು? ಸೈಕಲ್‌ವಾಲರು ಗ್ರಾಮಕ್ಕೆ ನುಗ್ಗಿ ಸಾಮಾನುಗಳನ್ನು ನಗರಕ್ಕೆ ತಾದುವಾರುತ್ತಾರೆ. ರೈತರು ಎರಡು ಕಾರಣಗಳಿಗಾಗಿ ತಮ್ಮಲ್ಲಿಯ ಸಾಮಾನುಗಳನ್ನು ಸಂತೆಗೆ ಕೊಡಲು ಒಪ್ಪುವದಿಲ್ಲ. ಒಂದು ಗ್ರಾಮದಲ್ಲಿ ದೊರೆಯುವ ಅಲ್ಪ ಬೆಲೆ. ಮತ್ತೊಂದು ಮಾರಿಬಿಟ್ಟರೆ ತಮಗೆ ಮುಂದೆ ಆಹಾರ ಪದಾರ್ಥಗಳು ಬೇಕಾದಾಗ ದೊರೆಯದಿರುವ ಕಾರಣ. ವ್ಯವಸಾಯಕ್ಕೆ ಬೇಕಾದ ಸಾಹಿತ್ಯಗಳಿಲ್ಲ, ಜನರಿಗೆ ಒಟ್ಟಿ ಇಲ್ಲ ಎಂದಿರುವಂತೆ ಕೃತಿಕ ಗೊಬ್ಬರವನ್ನು ಉಪಯೋಗಿಸುವುದು ರೈತನಿಗೆ ಕಷ್ಟವಾಗಿರುವ ಕಾರಣ ಉತ್ಪತ್ತಿ ಕಡಮೆಯಾಗಿ ಆಹಾರ ಸಮಸ್ಯೆ ದಿನದಿಂದ ದಿನಕ್ಕೆ ಕಠಿಣವಾಗುತ್ತಿದೆ ಇದರಿಂದ ರೈತರು ಮುಷ್ಕರಗಳಿಗೆ ತೊಡಗಿದ್ದಾರೆ. ಸರಕಾರದವರು ಬಿದುಕಿ ಹಚ್ಚಿ ಅವರನ್ನು ಕೆಲಸಕ್ಕೆ ಹಚ್ಚುವ ಯತ್ನ ಮಾಡುತ್ತಿದ್ದಾರೆ.

ಈ ಸಮಸ್ಯೆಯು ಬಹು ಜಟಿಲವಾಗಿದೆ. ನಗರವು ಎಷ್ಟರವರೆಗೆ ರೈತನಿಗೆ ಒರೆ ಈ ಕಾಗದದ ಹಣವನ್ನು ಕೊಡುತ್ತಿದೋ ಅಷ್ಟರವರೆಗೆ ರೈತನು ಜವಾಬ್ದಾರಿಯಿಂದ ಕೆಲಸಮಾಡಲಾರ. ಬೆಳೆ ಬೆಳೆಸುವ ರೈತನಿಗೆ ಕಾಗದದ ದುಡ್ಡು! ಕಾಗದದ ದುಡ್ಡನ್ನು ಕೊಟ್ಟರೆ ರೈತನಿಗೆ ಬೇಕಾದುದಕ್ಕೆ ಅಭಾವ! (ಕೂ)

ಅಚ್ಚಿನಲ್ಲಿದೆ! ಎದುರುನೋಡಿ!
ಚಿತ್ರಪತ್ರಿಕಾಪ್ರಪಂಚದಲ್ಲಿ
ನೂತನ ಸಾಹಸ
ಚಿತ್ರಪಟ
(ಸಚಿತ್ರ)
(ಅದರ ವ್ಯಕ್ತಿಗಳ ಜೀವನ ಪರಿಚಯ)
ಭಾರತದ ಚಲನಚಿತ್ರ ಪ್ರಪಂಚದ
ದಿಗ್ದರ್ಶಕರು, ನಿರ್ಮಾಪಕರು
ನಟರು, ನಟಿಯರುಗಳ
ಸಂಪೂರ್ಣ ಜೀವನ ಚರಿತ್ರೆ
ಇವರು ಈ ಸಿನಿಮಾ ಪ್ರಪಂಚಕ್ಕೆ
ಕಾಲಿಡುವ ಮೊದಲು ಹೇಗಿದ್ದರು?
ಇವೇ ಮೊದಲಾದ ಸಂಗತಿಗಳಿರುವ
೧೦೦ ಪುಟಗಳಿಗೆ
ಮಿಗಿಲಾಗಿ
ಸುಂದರ ತ್ರಿವರ್ಣ ಹೊದಿಕೆ
ಯೊಂದಿಗೆ ಹೊರಬೀಳಲಿದೆ

ವರ್ತಮಾನ-ಸಂಗ್ರಹ

ಮಿ॥ ಸ್ಟಾಲಿನ್ನರಿಂದ ಉತ್ತರ ತೆಗೆದುಕೊಂಡುಬರುತ್ತಿರುವೆ ಮಿ। ಜೋಸೆಫ್ ಡೇವಿಸ್‌ರವರು ಈಗ ಅಲಾಸ್ಕಾಕ್ಕೆ ಬಂದಿರುತ್ತಾರೆ.

ಜೊಂಬಾಯಿನಲ್ಲಿ ಟ್ರಾಂ ಗಾಡಿಗಳಲ್ಲಿ ಹತ್ತು ಜನರೂ ಒಬ್ಬರಾಗುತ್ತಲಿ ಇನ್ನೊಬ್ಬರು (ಕ್ಯೂ ಪದ್ಧತಿ ಮೇರೆ) ಹತ್ತಬೇಕೆಂದು ಪೋಲೀಸ್ ಹುಕುಂ ಆಗಿದೆ.

ಮದರಾಸ್ ಪೂರ್ವ ತೀರದಲ್ಲಿ ಮಳೆಯ ಹಾವಳಿಯಾಗಿ ಬೆಳೆಯೆಲ್ಲಾ ಕೆಟ್ಟಿದೆ. ರೈತರಿಗೆ ಸರ್ಕಾರಿಗೆ ಸಹಾಯ ಮಾಡುತ್ತಿರುವರು.

ಸ್ವೀಡನ್ನಿಗೆ ದುರಾಶೆಯಿಲ್ಲ

—

ಯೂರೋಪಿನಲ್ಲಿರುವ ಸಣ್ಣ ಸಣ್ಣ ದೇಶಗಳೆಲ್ಲಾ ತಮ್ಮ ದೇಶವು ದೊಡ್ಡದು ಆಗಬೇಕೆಂದು ಕೋರುತ್ತಿದ್ದರೂ ಈ ಕಾರಣನೇ ಈಗಿನ ಯುದ್ಧಕ್ಕೆ ಕಾರಣವಾದರೂ, ಸ್ವೀಡನ್ನಿಗೆ ಮಾತ್ರ ಈ ದುರಾಶೆಯಿಲ್ಲ, ಅದು ತಟಸ್ಥವಾಗಿರಲು ಸಾಧ್ಯವಾಗಿರುವುದಕ್ಕೆ ಇದೇ ಕಾರಣವೆನ್ನಬಹುದು.

Edited, Printed & published by M. S. Krishna Rao, at the Satyavadi Press. Chamaraja Agrahar, Mysore.

ರಣಜಿತ್ ಟಾಕೀಸ್ RANJIT — UJALA

ಸೌಂದರ್ಯ ಸೊಬಗಿನ ತಾರೆ ನಾಸೀಮ್ 2 ನೇ ವಾರ
ಮತ್ತು ನಟಶ್ರೇಷ್ಠ ಪೃಥ್ವೀರಾಜ್
ಪಾತ್ರವಹಿಸಿರುವ
ಉಜಾಲ
ಸಹಾಯಕನಟರು— ಲಲಿತಾಬಾಯಿ, ಮಿತ್ತಾಮುಷ್ರಾಫ್ ಮುಬಾರಕ್ ಮುಂತಾದವರು

ಹೆಚ್. ಆರ್. ಜಿ. ಸಿ. ಯವರ
ಶ್ರೀ ಪಿಕ್ಚರ್ಸ್ ತಯಾರಿಕೆ
ವಾಣಿ ಎಂಬ ಕನ್ನಡ ಸಾಮಾಜಿಕ ಚಿತ್ರ
ನಿಮ್ಮ ಮನರಂಜನೆಗಾಗಿ ಬೇಗಲೇ ಬರಲಿದೆ.

ಸಂಗೀತರತ್ನ ಟಿ. ಚೌಡಯ್ಯ, ಕಲ್ಚರ್ಡ್ ಕಮೆಡಿಯನ್ ಕೆ. ಹಿರಣ್ಣಯ್ಯ, ಗಾಯನಗಾಂಧರ್ವ ಚಂಪೆ ವೈದ್ಯನಾಥ ಭಾಗವತರ್ ಮೃದಂಗವಿದ್ವಾನ್ ಮಣಿ ಕೋಕಿ ಕಂಠ ಬಳ್ಳಾರಿ ಲಲಿತ, ಚಂದ್ರಮ್ಮ, ರತ್ನ, ಪಂಡರೀಬಾಯಿ, ಧನಭಾಗ್ಯಂ ಎ. ನಾರಾಯಣರಾವ್, ಕೆ. ಎರ್. ಮುಕುದೇವ್, ಮಾಸ್ಟರ್ ಪಿ. ವಿ. ಕೆ. ಮೂರ್ತಿ ಮುಂತಾದವರು ತಾರಾಗಣದಲ್ಲಿದ್ದಾರೆ.
ನಿರ್ದೇಶಕರು— ಜಿ. ಆರ್. ರಾಮಯ್ಯನವರು
ಸಂಗೀತ ನಿರ್ದೇಶಕರು— ಸಂಗೀತರತ್ನ ಟಿ. ಚೌಡಯ್ಯನವರು
ತಯಾರಿಕೆ— ಸಾಹುಕಾರ್ ಟಿ. ಎಸ್. ಶಿವಬಸವಸ್ವಾಮಿ
ಕಥಾ ಮತ್ತು ದಿಗ್ದರ್ಶಕರು— ಕೆ. ಹಿರಣ್ಣಯ್ಯ ಮತ್ತು ಎರ್. ಎಸ್. ಗೋಪಾಲ್
ಸ್ಟೂಡಿಯೋ—ಸೆಂಟ್ರಲ್ ಸ್ಟೂಡಿಯೋಸ್ ಲಿಮಿಟೆಡ್, ಕೊಯಮತ್ತೂರು

For good printing
Saraswati Printing Press
Lansdowne Buildings, Mysore
Lakshminarasimha Press
Srirampet, Mysore
ಸತ್ಯವಾದಿ ಪತ್ರಿಕೆಗೆ
ಚಂದಾದಾರರಾಗಿರಿ